# ಕರ್ನಾಟಕ ಸರ್ಕಾರ

## ತಹಶೀಲ್ದಾರರ ಬಳ್ಳಾರಿ ರವರ ಕಾರ್ಯಾಲಯದ ನಡುವಳಿಗಳು

| ವಾದಿಗಳು | ಪ್ರತಿವಾದಿಗಳು |
|---|---|
| ಹೆಚ್. ಅಮರಪ್ಪ ತಂದೆ ಶಿದ್ದನಗೌಡ, ಸಿಂಧುವಾಳ(ಗ್ರಾಮ) ಬಳ್ಳಾರಿ ತಾಲ್ಲೂಕು | ಕಂದಾಯ ನಿರೀಕ್ಷಕರು, ಮೋಕಾ |

ವಿಷಯ:– ಬಳ್ಳಾರಿ ತಾಲ್ಲೂಕು ಸಿಂಧುವಾಳ ಗ್ರಾಮದ ಸ.ನಂ. 327/A ವಿಸ್ತೀರ್ಣ–0.64 ಸೆಂಟ್ಸ್ ಜಮೀನಿಗೆ ಪೋತಿ/ಪಾಲು ವಿಭಾಗ ಪತ್ರದಂತೆ ಪಟ್ಟಾ ಬದಲಾವಣೆ ಮಾಡುವ ಬಗ್ಗೆ.

ಉಲ್ಲೇಖ:–1. ಸಹಾಯಕ ಆಯುಕ್ತರು, ಬಳ್ಳಾರಿ ಇವರ ಆದೇಶ ಸಂಖ್ಯೆ ಸಂ.ಕಂ. ಅಪೀಲು:135:11–12 ದಿ:– 04.12.2012.

2. ಅರ್ಜಿದಾರರ ಅರ್ಜಿ ದಿನಾಂಕ:–11.09.2013.

@@@@@@@

ಬಳ್ಳಾರಿ ತಾಲ್ಲೂಕು ಸಿಂಧುವಾಳ ಗ್ರಾಮದ ಶ್ರೀ. ಅಮರಪ್ಪ ತಂದೆ ಶಿದ್ದನಗೌಡ ಇವರು ಉಲ್ಲೇಖ(1) ಮತ್ತು (2) ರಂತೆ ಅರ್ಜಿ ಸಲ್ಲಿಸಿದ್ದು, ನಮೂನೆ (21) ರ ನೋಟಿಸಿನಲ್ಲಿ ದಿವಾಂಗತ ಶಿದ್ದನಗೌಡ ಇವರ ಹೆಸರನ್ನು ಕಡಿಮೆ ಮಾಡಿ ಅಮರಪ್ಪ ತಂದೆ ಶಿದ್ದನಗೌಡ ಇವರ ಹೆಸರಿಗೆ ಸ.ನಂ. 327/A ವಿಸ್ತೀರ್ಣ–0.64 ಎಕರೆ ಜಮೀನಿಗೆ ಪಟ್ಟ ಬದವಾವಣೆ ಮಾಡುವ ಬದಲಾಗಿ ಶಿದ್ದನಗೌಡ ಇವರ ಹೆಸರಿಗೆ ನಮೋನೆ–21 ನೋಟಿಸು ಪ್ರಚುರ ಪಡಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಮೋಕಾ ಇವರು ಪ್ರ್ಯಾಕ್ಸಿ ಚೆಕ್ ಲೀಟ್ಸ್ ಎಂದು ತಿರಸ್ಕರಿಸಿರುತ್ತಾರೆ.

ನೈಸರ್ಗಿಕ ನ್ಯಾಯದ ದೃಷ್ಟಿಯಿಂದ ಸಂಬಂಧಿಸಿದವರಿಗೆ ನೋಟೀಸು ಜಾರಿ ಮಾಡಿ ದಿನಾಂಕ:– ಮತ್ತು ದಿನಾಂಕ:– ದೆಂದು ವಿಚಾರಣೆ ಕೈಗೊಳ್ಳಲಾಗಿ ಅರ್ಜಿದಾರರು ಈ ಕೆಳಕಾಣಿಸಿದ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ.

1. ಸಿಂಧುವಾಳ ಗ್ರಾಮದ ಸ.ನಂ. 327/A ವಿಸ್ತೀರ್ಣ–1.29 ಜಮೀನಿನ ಪಹಣಿ ಪ್ರತಿಕೆ.
2. ದಿವಾಗಂತ ಶಿದ್ದನ ಗೌಡ ಖರೀದಿಸಿದ ಸದ್ರಿ ಜಮೀನಿನ ಕ್ರಯ ಪತ್ರದ ಡಾ॥ನಂ॥1587/1960/30.05.60.
3. ಮಾನ್ಯ ಸಹಾಯಕ ಆಯುಕ್ತರು, ಬಳ್ಳಾರಿ ರವರ ಮೇಲ್ಮನವಿ ಆದೇಶ: ಸಂ.ಕಂ.ಅಪೀಲು.
4. ಸದರಿಯವರ ಕುಟುಂಬದ ವಾರಸುದಾರರು ಸೇರಿ ಮಾಡಿ ಕೊಂಡ ಪಾಲು ವಿಭಾಗ ಪತ್ರ ದಿನಾಂಕ:– 22.01.2016.

ಮೇಲ್ಕಾಣಿಸಿದ ಎಲ್ಲಾ ದಾಖಲೆಗಳಿಂದ ಶ್ರೀ. ಅಮರಪ್ಪ ತಂದೆ ಶಿದ್ದನಗೌಡ ಇವರು ಸಿಂಧುವಾಳ ಗ್ರಾಮದ ಸ.ನಂ. 327/A (ಪೈಕಿ) ವಿಸ್ತೀರ್ಣ–0.64 ಸೆಂಟ್ಸ್ ಜಮೀನಿಗೆ ವಾರಸುದಾರರಾಗಿರುವುದು ದೃಢ ಪಡುವುದರಿಂದ ಈ ಕೆಳಕಾಣಿಸಿದ ಆದೇಶ.

ಸಂ.ಕಂ.ವಿವಾದ: 78:2015–16 ದಿನಾಂಕ: 4.4.16

### ಆದೇಶ

ಪೀಠಿಕೆಯಲ್ಲಿ ವಿವರಿಸಿದ ಎಲ್ಲಾ ಪ್ರಕರಣಗಳು ಮತ್ತು ದಾಖಲೆಗಳಿಂದ ಸಿಂಧುವಾಳ ಗ್ರಾಮದ ಸ.ನಂ. 327/A(ಪ್ಯಕಿ) ವಿಸ್ತೀರ್ಣ 0.64 ಸೆಂಟ್ಸ್ ಜಮೀನಿಗೆ ಶ್ರೀ ಅಮರಪ್ಪ ತಂದೆ ಶಿದ್ದನಗೌಡ ಇವರ ಹೆಸರಿಗೆ ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 128 ರನ್ವಯ ನೋಟಿಸು 21 ರ ಜಾರಿಗೊಳಿಸಿ ಪಟ್ಟಾ ಬದಲಾವಣೆ ಮಾಡಲು ಆದೇಶಿಸಿದೆ. ಆದೇಶವನ್ನು ದಿನಾಂಕ:–4.4.16 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದರು.

4/4/16

ತಹಶೀಲ್ದಾರರು,

ತಹಶೀಲ್ದಾರರು, ಬಳ್ಳಾರಿ

Tasildar, Bellary.